ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

10

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ - ಅನುದಾನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ

ದಿನಾಂಕ : DATE : 21-12-2020

# ರಾಜ್ಯಕ್ಕೆ ಇನ್ನೂ ₹4,509 ಕೋಟಿ ಸಾಲಕ್ಕೆ ಕೇಂದ್ರ ಸರ್ಕಾರ ಅವಕಾಶ

## ಉದ್ಯಮಸ್ನೇಹಿ ಸುಧಾರಣೆ ಜಾರಿಗೆ ಕೇಂದ್ರ ಸರ್ಕಾರದ ಗಿಫ್ಟ್

ನವದೆಹಲಿ: ಕರ್ನಾಟಕ ಸರ್ಕಾರಕ್ಕೆ ಈ ವರ್ಷ ಹೆಚ್ಚುವರಿಯಾಗಿ 4,509 ಕೋಟಿ ರು. ಸಾಲ ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಉದ್ಯಮ ಸ್ನೇಹಿ ಕ್ರಮಗಳನ್ನು ಜಾರಿಗೊಳಿಸುವ ಸಂಬಂಧ ಕೇಂದ್ರ ಸರ್ಕಾರ ನೀಡಿದ್ದ ಗುರಿಯನ್ನು ಯಶಸ್ವಿಯಾಗಿ ಈಡೇರಿಸಿದ ಕಾರಣಕ್ಕೆ ಕರ್ನಾಟಕ, ಆಂಧ್ರಪ್ರದೇಶ, ಮಧ್ಯಪ್ರದೇಶ, ತಮಿಳು ನಾಡು ಹಾಗೂ ತೆಲಂಗಾಣಕ್ಕೆ ಒಟ್ಟು 16,728 ಕೋಟಿ ರು. ಹೆಚ್ಚುವರಿ ಸಾಲ ಮಾಡಲು ಅನುಮತಿ ದೊರೆತಿದೆ.



ವಿತ್ತೀಯ ಹೊಣೆಗಾರಿಕೆ ಮತ್ತು ಆಯ ವ್ಯಯ ನಿರ್ವಹಣೆ (ಎಫ್‌ಆರ್‌ಬಿಎಂ) ಕಾಯ್ದೆ ಪ್ರಕಾರ ರಾಜ್ಯವು ತನ್ನ ಸಮಗ್ರ ರಾಷ್ಟ್ರೀಯ ಉತ್ಪನ್ನ (ಜಿಎಸ್‌ಡಿಪಿ)ದ ಶೇ.3 ರಷ್ಟು ಸಾಲ ಮಾಡಲು ಅಧಿಕಾರ ಹೊಂದಿದೆ. ಈ ವರ್ಷ ಕೊರೋನಾದಿಂದ ಉಂಟಾದ ನಷ್ಟ ತುಂಬಿಕೊಳ್ಳಲು ಶೇ.2ರಷ್ಟು ಹೆಚ್ಚುವರಿ ಸಾಲ (ಒಟ್ಟು ಶೇ.5ರಷ್ಟು ಸಾಲ) ಮಾಡಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿತ್ತು. ಆದರೆ, ಅದಕ್ಕೆ ನಾಲ್ಕು ಷರತ್ತುಗಳನ್ನು ವಿಧಿಸಿತ್ತು. ಏಕ ದೇಶ ಏಕ ಪಡಿತರ, ಉದ್ಯಮ ಸ್ನೇಹಿ ಕ್ರಮಗಳು, ನಗರ ಸ್ಥಳೀಯ ಸಂಸ್ಥೆಗಳ ಸುಧಾರಣೆ ಹಾಗೂ ಇಂಧನ ಕ್ಷೇತ್ರದ ಸುಧಾರಣೆ ಈ ನಾಲ್ಕು ಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದರೆ ಮಾತ್ರ ಹೆಚ್ಚು ಸಾಲ ಮಾಡಲು ಅನುಮತಿ ನೀಡುವುದಾಗಿ ಹೇಳಿತ್ತು. ಅದರಂತೆ ಕರ್ನಾಟಕ ಸೇರಿದಂತೆ ಐದು ರಾಜ್ಯಗಳು ಉದ್ಯಮ ಸ್ನೇಹಿ ವಾತಾವರಣ ನಿರ್ಮಾಣ ಮಾಡುವ ಗುರಿಯನ್ನು ಯಶಸ್ವಿಯಾಗಿ ಈಡೇರಿಸಿವೆ. ಹೀಗಾಗಿ ಹೆಚ್ಚುವರಿ ಸಾಲಕ್ಕೆ ಅನುಮತಿ ದೊರೆತಿದೆ.